ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2013–14 ಸಾಲಿನ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸಹಾಯಧನವನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ : ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : No.5-40/2013-BE dated 23.12.2013

ಪ್ರಸ್ತಾವನೆ:

2013–14ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯವು ಉಲ್ಲೇಖಿತ ಪತ್ರದಲ್ಲಿ ಕೇಂದ್ರ ಸಹಾಯಧನ ರೂ. 500.00 ಲಕ್ಷಗಳನ್ನು ಮೊದಲನೇ ಕಂತನ್ನಾಗಿ ಬಿಡುಗಡೆ ಮಾಡಲಾಗಿದೆ.

2013–14ನೇ ಸಾಲಿನ ರಾಜ್ಯ ಆಯವ್ಯಯದಡಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಲೆಕ್ಕ ಶೀರ್ಷಿಕೆ 2810–60–198–6–01 ರಡಿ ಕೇಂದ್ರ ಪಾಲಿನದಾಗಿ ರೂ.1182.60 ಲಕ್ಷಗಳನ್ನು ನಿಗದಿಪಡಿಸಲಾಗಿದೆ ಮತ್ತು ಲೆಕ್ಕ ಶೀರ್ಷಿಕೆ 2810–60–198–6–01 ಯೋಜನೆ ಅಡಿಯಲ್ಲಿ ರಾಜ್ಯ ಆಯವ್ಯಯದಡಿ ರಾಜ್ಯ ಪಾಲಿನ ಸಹಾಯಧನ ರೂ. 283.31 ಲಕ್ಷ ಒಟ್ಟು ರೂ. 1465.91 ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸದರಿ ಅನುದಾನವನ್ನು ಜಿಲ್ಲೆಗಳಿಗೆ, ನಿಗದಿಪಡಿಸಿದ ಗುರಿ, ಆಯವ್ಯಯದಡಿ ಹಂಚಿಕೆ ಮಾಡಲಾದ ಅನುದಾನ ಹಾಗೂ ಅನುದಾನದ ಮಿತಿಗೊಳಪಟ್ಟು, ಜಿಲ್ಲಾ ಪಂಚಾಯತಿಗಳಿಗೆ ಕೇಂದ್ರ ಮತ್ತು ರಾಜ್ಯ ಸಹಾಯಧನವನ್ನು ಬಿಡುಗಡೆ ಮಾಡಲು ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 32 ಜೈಅಯೋ 2013, ಬೆಂಗಳೂರು, ದಿನಾಂಕ : 30.01.2014**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2013–14ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಪಾಲಿನ ಸಹಾಯಧನ ರೂ. 500.00 ಲಕ್ಷಗಳನ್ನು (ರೂ. ಐದು ನೂರು ಲಕ್ಷಗಳು ಮಾತ್ರ) ಮತ್ತು ರಾಜ್ಯ ಪಾಲಿನ ಸಹಾಯಧನ ರೂ. 212.00 ಲಕ್ಷ (ರೂ. ಎರಡು ನೂರು ಹನ್ನೆರಡು ಲಕ್ಷಗಳು ಮಾತ್ರ) ಇದರೊಂದಿಗೆ ಲಗತ್ತಿಸಲಾದ ಅನುಬಂಧದಲ್ಲಿ ನಮೂದಿಸಲಾದಂತೆ ಬಿಡುಗಡೆ ಮಾಡಲಾಗಿದೆ.

ಹಾಲಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ವಿನಿಯೋಗಿಸಿ, ನಿಗದಿಪಡಿಸಲಾದ ಗುರಿಯನ್ವಯ ಶೇ.100 ರಷ್ಟು ಪ್ರಗತಿಯನ್ನು ಫೆಬ್ರವರಿ 2014 ರೊಳಗೆ ಕಡ್ಡಾಯವಾಗಿ ಸಾಧಿಸುವುದು ಹಾಗೂ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾದ ಕೇಂದ್ರ ಹಾಗೂ ರಾಜ್ಯ ಸಹಾಯಧನಕ್ಕೆ ಸಿ.ಎ.ರವರಿಂದ ಆಡಿಟ್ ಮಾಡಿಸಿ, ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಬಿಡುಗಡೆ ಮಾಡಿದ ಅನುದಾನವನ್ನು ಲೆಕ್ಕ ಶೀರ್ಷಿಕೆ 2810-60-198-6-01 ಯಡಿ ವೆಚ್ಚ ಭರಿಸತಕ್ಕದ್ದು. ಸದರಿ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಗ್ರಾಅಪ 55 ಪಿಬಿಎಸ್ 2014 ದಿನಾಂಕ 30-01-2014 ರಲ್ಲಿ ಸಹಮತಿಯನ್ನು ಪಡೆದು ಅದರನುಸಾರ ಹಾಗೂ ಆರ್ಥಿಕ ಇಲಾಖೆ, ಅಧಿಕೃತ ಟಿಪ್ಪಣಿ ಸಂಖ್ಯೆ : ಆಇ 393 ವೆಚ್ಚ 6 2013 (ವೆಚ್ಚ-6) ದಿನಾಂಕ : 07-01-2014 ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಜಿಲ್ಲಾ ಪಂಚಾಯತ್‌ಗಳು ಉಳಿಸಿಕೊಂಡಿರುವ ಕೇಂದ್ರ ಮತ್ತು ರಾಜ್ಯ ಸಹಾಯಧನದ ಆರಂಭಶಿಲ್ಕು ಹಿಂದಿನ ಸಾಲಿನ ಜೈವಾನಿಲ ಘಟಕಗಳ ಸ್ಥಾಪನೆಯ ವೆಚ್ಚ ಭರಿಸಲು ಅನುಮತಿಸಲಾಗಿದೆ.

ಎಸ್.ಸಿ. ಘಟಕದಡಿಯಲ್ಲಿ ಬಾಕಿ ಉಳಿಸಿಕೊಂಡಿರುವ ಅನುದಾನವನ್ನು ಪೂರ್ಣವಾಗಿ ಬಳಸಿ ಹಣ ಬಳಕೆ ಪ್ರಮಾಣ ಪತ್ರ ನೀಡತಕ್ಕದ್ದು.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ವೆಚ್ಚ ಭರಿಸಿ, ಈ ಅನುದಾನ ಬಳಕೆ ಮಾಡಿಕೊಂಡಿರುವ ಫಲಾನುಭವಿಗಳ ವಿವರಗಳನ್ನು ಒದಗಿಸಿದ್ದಲ್ಲಿ ಮಾತ್ರ ಎರಡನೇ ಕಂತು ಬಿಡುಗಡೆ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರೋಹಿಣಿ ಸಿಂಧೂರಿ)
ನಿರ್ದೇಶಕರು (ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿ (ಅಭಿವೃದ್ಧಿ) / ಮುಖ್ಯ ಲೆಕ್ಕಾಧಿಕಾರಿಗಳು.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಖಜಾನಾಧಿಕಾರಿಗಳು.
6. ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
7. ಖಜಾನೆಗಳ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
8. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
10. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

# ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 32 ಜೈಅಯೋ 2013 ದಿನಾಂಕ 30.01.2014

**2013–14ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ (ಮೊದಲನೇ ಕಂತಿನ) ಸಹಾಯಧನ ಬಿಡುಗಡೆಯ ವಿವರ :**

| ಕ್ರ. ಸಂ | ಜಿಲ್ಲೆ | ಬಿಡುಗಡೆ ಮಾಡಲಾದ ಕೇಂದ್ರ ಸಹಾಯಧನ ಅನುದಾನ (ರೂ.ಲಕ್ಷಗಳಲ್ಲಿ) | ಬಿಡುಗಡೆ ಮಾಡಲಾದ ರಾಜ್ಯ ಸಹಾಯಧನ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 7.569 | 10.00 |
| 2 | ಬೆಂಗಳೂರು (ಗ್ರಾ) | 12.87 | 10.00 |
| 3 | ಬೆಂಗಳೂರು (ನಗರ) | 6.786 | 10.00 |
| 4 | ಬೆಳಗಾಂ | 111.360 | 20.00 |
| 5 | ಬಳ್ಳಾರಿ | 1.00 | 0 |
| 6 | ಬೀದರ್ | 2.83 | 10.00 |
| 7 | ಬಿಜಾಪುರ | 10.876 | 10.00 |
| 8 | ಚಾಮರಾಜನಗರ | 12.876 | 0 |
| 9 | ಚಿಕ್ಕಮಗಳೂರು | 1.00 | 0 |
| 10 | ಚಿಕ್ಕಬಳ್ಳಾಪುರ | 9.686 | 6.00 |
| 11 | ಚಿತ್ರದುರ್ಗ | 3.351 | 0 |
| 12 | ದಕ್ಷಿಣ ಕನ್ನಡ | 30.00 | 10.00 |
| 13 | ದಾವಣಗೆರೆ | 12.876 | 10.00 |
| 14 | ಧಾರವಾಡ | 9.876 | 8.00 |
| 15 | ಗದಗ | 8.004 | 4.30 |
| 16 | ಗುಲ್ಬರ್ಗಾ | 1.00 | 3.96 |
| 17 | ಹಾಸನ | 53.675 | 15.00 |
| 18 | ಹಾವೇರಿ | 12.876 | 10.00 |
| 19 | ಕೊಡಗು | 5.307 | 5.00 |
| 20 | ಕೋಲಾರ | 2.584 | 2.00 |
| 21 | ಕೊಪ್ಪಳ | 9.651 | 10.00 |
| 22 | ಮಂಡ್ಯ | 8.676 | 10.00 |
| 23 | ಮೈಸೂರು | 17.40 | 0 |
| 24 | ರಾಮನಗರ | 6.00 | 2.00 |
| 25 | ರಾಯಚೂರು | 8.876 | 10.00 |
| 26 | ಶಿವಮೊಗ್ಗ | 82.65 | 20.00 |
| 27 | ತುಮಕೂರು | 15.422 | 0 |
| 28 | ಉಡುಪಿ | 15.00 | 5.00 |
| 29 | ಉತ್ತರ ಕನ್ನಡ | 13.485 | 6.00 |
| 30 | ಯಾದಗಿರಿ | 6.438 | 4.74 |
| | ಒಟ್ಟು | **500.00** | **212.00** |

ನಿರ್ದೇಶಕರು (ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.